KACD420015862020

HANUMANTHARAYAPPA B R
Digitally signed by HANUMANTHARAYAPPA B R
Date: 2026.07.30 15:31:21 +0530

Presented on : 15-10-2020
Registered on : 15-10-2020
Decided on : 24-07-2026
Duration : 5 years, 9 months, 9 days

# ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಹೊಳಲ್ಕೆರೆ.

ಃ ಉಪಸ್ಥಿತರು ಃ

ಶ್ರೀ.ಹನುಮಂತರಾಯಪ್ಪ.ಬಿ.ಆರ್., ಬಿ.ಎ.ಎಲ್.ಎಲ್.ಬಿ.,
ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಯವರು, ಹೊಳಲ್ಕೆರೆ
ದಿನಾಂಕ **24** ನೇ ಜುಲೈ ಮಾಹೆ **2026** ನೇ ಇಸವಿ

ಕ್ರಿಮಿನಲ್ ಮೊಕದ್ದಮೆ ಸಂಖ್ಯೆಃ **1084/2020**

| | |
|---|---|
| ಪಿರ್ಯಾದುದಾರರು ಃ | ಹೊಳಲ್ಕೆರೆ ಪೊಲೀಸ್ ಠಾಣೆ,<br>(ಪರವಾಗಿ ಃ- ಸ.ಸ.ಅ.) |
| ಃ ವಿರುದ್ಧ ಃ | |
| ಆರೋಪಿತರು | **1.** ಜಿ.ಆರ್. ಚಿಕ್ಕಣ್ಣ ತಂದೆ ರಂಗಪ್ಪ<br><br>(**1** ನೇ ಆರೋಪಿಯು ಮೃತಪಟ್ಟಿರುತ್ತಾನೆ )<br><br>**2.** ಮಂಜುನಾಥ ಯಾನೆ ಮಂಜಪ್ಪ ತಂದೆ ನಾಗರಾಜಪ್ಪ<br>**30** ವರ್ಷ<br>ಇಬ್ಬರೂ ವಾಸಃ ಗೊಲ್ಲರಹಳ್ಳಿ ಗ್ರಾಮ, ಹೊಳಲ್ಕೆರೆ ತಾಲ್ಲೂಕು |
| (ಆರೋಪಿ ಪರ ಶ್ರೀ. ಪಿ.ಎಲ್.ಎಂ., ವಕೀಲರು ಹಾಜರಾಗಿರುತ್ತಾರೆ) | |

| | |
|---|---|
| ಅಪರಾಧ ಮಾಡಿದ ದಿನಾಂಕ | **25/02/2015** |
| ಅಪರಾಧ ವರದಿ ಮಾಡಿದ ದಿನಾಂಕ | **25/02/2015** |
| ಆರೋಪಿತ | ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. |
| ವಿಚಾರಣೆ ಪ್ರಾರಂಭಿಸಿದ ದಿನಾಂಕ | **14/01/2019** |
| ವಿಚಾರಣೆ ಮುಕ್ತಾಯವಾದ ದಿನಾಂಕ | **12/02/26** |
| ಆರೋಪಿಸಲ್ಪಟ್ಟ ಅಪರಾಧಗಳು | ಕಲಂ.**32** ಮತ್ತು **34** ಕೆ.ಇ.ಕಾಯಿದೆ |
| ತೀರ್ಪು ಘೋಷಣೆಯ ದಿನಾಂಕ | **24/07/26** |
| ನ್ಯಾಯಾಧೀಶರ ಅಭಿಪ್ರಾಯ | ದೋಷಮುಕ್ತಗೊಳಿಸಲಾಗಿದೆ |

(ಹನುಮಂತರಾಯಪ್ಪ.ಬಿ.ಆರ್)
ಅಪರ ಸಿವಿಲ್ ನ್ಯಾಯಾಧೀಶರು
ಪ್ರ.ದ.ನ್ಯಾ.ದಂಡಾಧಿಕಾರಿರವರು, ಹೊಳಲ್ಕೆರೆ

## ಃಃ ತೀರ್ಪು ಃಃ

ಹೊಳಲ್ಕೆರೆ ಪೋಲೀಸ್ ಠಾಣೆ ರವರು 1 ಮತ್ತು 2 ನೇ ಆರೋಪಿತರ ವಿರುದ್ಧ ಕರ್ನಾಟಕ ರಾಜ್ಯ ಅಬಕಾರಿ ಕಾಯಿದೆ 1965 ರ ಕಲಂ. 32 ಮತ್ತು 34 ರ ಅಡಿಯಲ್ಲಿನ ಶಿಕ್ಷಾರ್ಹ ಅಪರಾಧಕ್ಕಾಗಿ ಆರೋಪ ಪಟ್ಟಿ ಸಲ್ಲಿಸಿರುತ್ತಾರೆ. 1 ನೇ ಆರೋಪಿಯು ಅಭಿಯೋಜನೆಯ ವಿಚಾರಣೆಯ ಹಂತದಲ್ಲಿ ಮರಣಹೊಂದಿದ್ದು ದಿನಾಂಕ 21/07/2025 ರ ಆದೇಶದಂತೆ ಆರೋಪಿಯ ವಿರುದ್ದ ಪ್ರಕರಣವನ್ನು ಕೈಬಿಡಲಾಗಿರುತ್ತದೆ.

ಅಭಿಯೋಜನೆ ಪ್ರಕರಣದ ಸಾರಾಂಶ ಏನೆಂದರೆ ಃ-

**2.** ದಿನಾಂಕ **25/02/2015** ರಂದು ಸಂಜೆ **6-15** ಗಂಟೆಗೆ ಸಮಯದಲ್ಲಿ ಹೊಳಲ್ಕೆರೆ ತಾಲ್ಲೂಕು ಆರ್.ಗೊಲ್ಲರಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಪಕ್ಕದ ಪೆಟ್ಟಿಗೆಯಲ್ಲಿ ಆರೋಪಿತರು **(1) 180** ಎಂ.ಎಲ್.ನ **106** ಓಲ್ಡ್ ಟವರಿನ್ ವಿಸ್ಕಿ ಪೌಚುಗಳು **(2) 90** ಎಂ.ಎಲ್.ನ ರಾಜಾ ವಿಸ್ಕಿ **96** ಪೌಚುಗಳು **(3) 180** ಎಂ.ಎಲ್.ನ ರಾಜಾ ವಿಸ್ಕಿ **17** ಪೌಚ್‌ಗಳು **(4) 330**

ಎಂ.ಎಲ್.ನ 19 ನಾಕಔಟ್ ಬಾಟಲಿಗಳನ್ನು ಸರ್ಕಾರದ ಯಾವುದೇ ಪರವಾನಗಿ ಇಲ್ಲದೇ ಅಕ್ರಮವಾಗಿ ಹೆಚ್ಚಿನ ಲಾಭಗಳಿಸುವ ಉದ್ದೇಶದಿಂದ ಮಾರಾಟ ಮಾಡುತ್ತಿದ್ದಾರೆಂದು ದೋ ಸಾಕ್ಷಿ-1 ರವರು ದೋ.ಸಾಕ್ಷಿ-2 ಮತ್ತು 3 ರವರ ಸಮಕ್ಷಮ ಮತ್ತು ದೋ.ಸಾಕ್ಷಿ-4 ರಿಂದ 6 ರವರ ಸಹಾಯದಿಂದ ದಾಳಿ ಮಾಡಿ ಮೇಲ್ಕಂಡ ಮದ್ಯದ ಪೌಚುಗಳನ್ನು ವಶಪಡಿಸಿಕೊಳ್ಳಲಾಗಿರುತ್ತದೆ ಎಂದು ತನಿಖೆಯಿಂದ ಕಂಡುಬಂದಿರುತ್ತದೆ ಎಂದು ಆರೋಪಿತರ ವಿರುದ್ದ ಕಲಂ.32 ಮತ್ತು 34 ಕರ್ನಾಟಕ ರಾಜ್ಯ ಅಬಕಾರಿ ಕಾಯಿದೆ 1965 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧಕ್ಕಾಗಿ ಆರೋಪ ಪಟ್ಟಿ ಸಲ್ಲಿಸಿರುತ್ತಾರೆ.

3. ಈ ನ್ಯಾಯಾಲಯವು ಆರೋಪ ಪಟ್ಟಿಯಲ್ಲಿನ ಆರೋಪವನ್ನು ಆಧರಿಸಿ ಸಂಜ್ಞೆಯನ್ನು ತೆಗೆದುಕೊಂಡು ಆರೋಪಿತರಿಗೆ ಈ ನ್ಯಾಯಾಲಯದಿಂದ ಸಮನ್ಸ್ ಜಾರಿ ಮಾಡಿದ್ದು, ಆರೋಪಿತರು ವಕೀಲರ ಮೂಲಕ ಹಾಜರಾಗಿ ಜಾಮೀನು ಅರ್ಜಿಯನ್ನು ಸಲ್ಲಿಸಿ ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ಆರೋಪಿತರಿಗೆ ದೋಷಾರೋಪಣೆ ಪಟ್ಟಿಯ ದಾಖಲೆಗಳನ್ನು ಸಿ.ಆರ್.ಪಿ.ಸಿ ಕಲಂ.207 ರ ಅಡಿಯಲ್ಲಿ ಒದಗಿಸಲಾಗಿರುತ್ತೆದೆ ಆರೋಪಿತರಿಗೆ ಕರ್ನಾಟಕ ರಾಜ್ಯ ಅಬಕಾರಿ ಕಾಯಿದೆ 1965 ರ ಕಲಂ.32 ಮತ್ತು 34 ಅಡಿಯಲ್ಲಿನ ಅಪರಾಧಗಳ ಬಗ್ಗೆ ಆಪಾದನೆಯ ಸಾರಾಂಶಗಳನ್ನು ಓದಿ ಹೇಳಿದ್ದು ಆರೋಪಿತರು ಆರೋಪದ ಎಲ್ಲಾ ಅಂಶಗಳನ್ನು ನಿರಾಕರಿಸಿದ್ದು ವಿಚಾರಣೆಯನ್ನು ಬಯಸಿರುತ್ತಾರೆ.

4. ಅಭಿಯೋಜನೆಯು ಆರೋಪಿತರ ಮೇಲೆ ಆರೋಪಿಸಿರುವ ಆರೋಪವನ್ನು ಸಾಭೀತುಪಡಿಸುವ ಸಲುವಾಗಿ ಅಭಿಯೋಜನೆಯವರು ಸಾಕ್ಷ್ಯ ವಿಚಾರಣೆಯನ್ನು ಆರಂಭಿಸಿದ್ದು, ಒಟ್ಟು 09 ಸಾಕ್ಷಿದಾರರ ಪೈಕಿ 6 ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿದ್ದು, ಚಾಸಾ.6, 2, 1, 3, 5, 9 ರವರನ್ನು ಪ್ರಾಸಾ.1 ರಿಂದ ಪ್ರಾಸಾ.6 ರಂತೆ ಸಾಕ್ಷಿದಾರರ ಹೇಳಿಕೆಗಳನ್ನು ನೀಡಿದ್ದು, ನಿಪಿ.1 ರಿಂದ ನಿಪಿ.6 ರಂತೆ ಅಭಿಯೋಜನೆಯ ದಾಖಲೆಗಳನ್ನು ಗುರುತಿಸಿಕೊಂಡಿದ್ದು, ಅದೇ ರೀತಿ (1) 180 ಎಂ.ಎಲ್.ನ 1 ಓಲ್ಡ್ ಟವರಿನ್ ವಿಸ್ಕಿ ಪೌಚು (2) 90 ಎಂ.ಎಲ್.ನ ರಾಜಾ ವಿಸ್ಕಿ 1 ಪೌಚುಗಳು (3) 180

ಎಂ.ಎಲ್.ನ ರಾಜಾ ವಿಸ್ಕಿ 1 ಪೌಚ್‌ಗಳು (4) 330 ಎಂ.ಎಲ್.ನ 1 ನಾಕ್ ಔಟ್ ಬಾಟಲಿಗಳನ್ನು ಮು.ಮಾ.1 ರಿಂದ ಮು.ಮಾ.4 ಎಂದು ಗುರುತಿಸಿಕೊಳ್ಳಲಾಗಿರುತ್ತದೆ. ಅಭಿಯೋಜನೆಯ ಸಾಕ್ಷ್ಯ ವಿಚಾರಣೆಯನ್ನು ಮುಕ್ತಾಯಗೊಳಿಸಿದ ನಂತರ ಆರೋಪಿತರಿಗೆ ಸಿ.ಆರ್.ಪಿ.ಸಿ ಕಲಂ.313 ರಡಿಯಲ್ಲಿ ಆರೋಪಿತರ ಹೇಳಿಕೆಯನ್ನು ದಾಖಲಿಸಿಕೊಂಡಿದ್ದು, ತನ್ನ ವಿರುದ್ಧವಾಗಿ ಸಾಕ್ಷಿದಾರರು ಹೇಳಿರುವ ಎಲ್ಲಾ ಹೇಳಿಕೆಯ ಅಂಶಗಳನ್ನು ನಿರಾಕರಿಸಿರುತ್ತಾರೆ, ಅದೇರೀತಿ ಸಿ.ಆರ್.ಪಿ.ಸಿ ಕಲಂ.437-ಎ ಅಡಿಯಲ್ಲಿ ಆರೋಪಿರಿಂದ ಜಾಮೀನು ಪಡೆಯಲಾಗಿರುತ್ತದೆ.

5. ಅಭಿಯೋಜನೆಯ ಸರ್ಕಾರಿ ವಕೀಲರ ಮತ್ತು ಆರೋಪಿತರ ಪರ ವಕೀಲರ ವಾದ ವಿವಾದವನ್ನು ಕೇಳಲಾಯಿತು ಹಾಗೂ ಕಡತದಲ್ಲಿರುವ ಎಲ್ಲಾ ಸಾಕ್ಷ್ಯದಾರಗಳನ್ನು ಕೂಲಂಕುಷವಾಗಿ ಪರಿಶೀಲಿಸಿದ ನಂತರ ಈ ಕೆಳಕಂಡ ಅಂಶಗಳು ನ್ಯಾಯಾಲಯದ ಪರಿಗಣನೆಗೆ ಉದ್ಭವಿಸುತ್ತದೆ.

**6.** ಈ ಪ್ರಕರಣದಲ್ಲಿ ಉದ್ಭವಿಸುವ ವಿವಾದಾಂಶವೇನೆಂದರೆ ಃ

> 1) ದಿನಾಂಕ 25/02/2015 ರಂದು ಸಂಜೆ 6-15 ಗಂಟೆ ಸಮಯದಲ್ಲಿ ಹೊಳಲ್ಕೆರೆ ತಾಲ್ಲೂಕು ಆರ್.ಗೊಲ್ಲರಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಪಕ್ಕದ ಪೆಟ್ಟಿಗೆಯಲ್ಲಿ ಆರೋಪಿಯು **(1) 180** ಎಂ.ಎಲ್.ನ **106** ಓಲ್ಡ್ ಟವರಿನ್ ವಿಸ್ಕಿ ಪೌಚುಗಳು **(2) 90** ಎಂ.ಎಲ್.ನ ರಾಜಾ ವಿಸ್ಕಿ **96** ಪೌಚುಗಳು **(3) 180** ಎಂ.ಎಲ್.ನ ರಾಜಾ ವಿಸ್ಕಿ **17** ಪೌಚ್‌ಗಳು **(4) 330** ಎಂ.ಎಲ್.ನ **19** ನಾಕ್ ಔಟ್ ಬಾಟಲಿಗಳನ್ನು ಯಾವುದೇ ಪರವಾನಗಿ ಇಲ್ಲದೇ ಅಕ್ರಮವಾಗಿ ಹೊಂದಿರುತ್ತಾರೆಂದು ಕರ್ನಾಟಕ ಅಬಕಾರಿ ಕಾಯ್ದೆ ಉಲ್ಲಂಘಿಸಿದ್ದು, ಆ ಮೂಲಕ ಕಲಂ.32 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತುಪಡಿಸುವರೇ **?**

> **2)** ಮೇಲೆ ಹೇಳಲಾದ ದಿನಾಂಕ, ಸಮಯ ಸ್ಥಳದಲ್ಲಿ ಆರೋಪಿತರು ಆರೋಪಿತರು **(1)** 180 ಎಂ.ಎಲ್.ನ 106 ಓಲ್ಡ್ ಟವರಿನ್ ವಿಸ್ಕಿ ಪೌಚುಗಳು **(2) 90** ಎಂ.ಎಲ್.ನ ರಾಜಾ ವಿಸ್ಕಿ 96 ಪೌಚುಗಳು **(3) 180** ಎಂ.ಎಲ್.ನ ರಾಜಾ ವಿಸ್ಕಿ 17 ಪೌಚ್‌ಗಳು **(4)** 330 ಎಂ.ಎಲ್.ನ **19** ನಾಕಔಟ್ ಬಾಟಲಿಗಳನ್ನು ಯಾವುದೇ ಪರವಾನಗಿ ಇಲ್ಲದೇ

ಅಕ್ರಮವಾಗಿ ಹೊಂದಿ ಹೆಚ್ಚಿನ ಲಾಭಗಳಿಸಲು ಸಾರ್ವಜನಿಕರಿಗೆ ಮಾರಾಟ ಮಾಡುವ ಉದ್ದೇಶದಿಂದ ವಶದಲ್ಲಿಟ್ಟುಕೊಂಡಿರುತ್ತಾರೆ. ಆ ಪ್ರಕಾರ ಆರೋಪಿತರು ಕಲಂ.34 ಕರ್ನಾಟಕ ರಾಜ್ಯ ಅಬಕಾರಿ ಕಾಯಿದೆ 1965 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತುಪಡಿಸುವರೇ?

3) ಯಾವ ಆದೇಶ ?

**7.** ಮೇಲ್ಕಂಡ ವಿವಾದಾಂಶಕ್ಕೆ ಈ ಕೆಳಕಂಡ ಕಾರಣಗಳಿಗಾಗಿ ಉತ್ತರಿಸುತ್ತೇನೆ.

ಅಂಶ 1 ಃ ನಕಾರಾತ್ಮಕವಾಗಿ
ಅಂಶ 2 ಃ ನಕಾರಾತ್ಮಕವಾಗಿ
ಅಂಶ 3 ಃ ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ

## ಕಾರಣಗಳು

**8. ಅಂಶ 1 ಮತ್ತು 2 ಃ-** ಅಭಿಯೋಜನೆಯ ಪ್ರಕಾರ ದಿನಾಂಕ 25/02/2015 ರಂದು ಸಂಜೆ 6-15 ಗಂಟೆಗೆ ಸಮಯದಲ್ಲಿ ಹೊಳಲ್ಕೆರೆ ತಾಲ್ಲೂಕು ಆರ್.ಗೊಲ್ಲರಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಪಕ್ಕದ ಪೆಟ್ಟಿಗೆಯಲ್ಲಿ ಆರೋಪಿತರು (1) 180 ಎಂ.ಎಲ್.ನ 106 ಓಲ್ಡ್ ಟವರಿನ್ ವಿಸ್ಕಿ ಪೌಚುಗಳು (2) 90 ಎಂ.ಎಲ್.ನ ರಾಜಾ ವಿಸ್ಕಿ 96 ಪೌಚುಗಳು (3) 180 ಎಂ.ಎಲ್.ನ ರಾಜಾ ವಿಸ್ಕಿ 17 ಪೌಚ್‌ಗಳು (4) 330 ಎಂ.ಎಲ್.ನ ನಾಕಔಟ್ 19 ಬಾಟಲಿಗಳನ್ನು ಸರ್ಕಾರದ ಯಾವುದೇ ಪರವಾನಗಿ ಇಲ್ಲದೇ ಅಕ್ರಮವಾಗಿ ಹೆಚ್ಚಿನ ಲಾಭಗಳಿಸುವ ಉದ್ದೇಶದಿಂದ ಮಾರಾಟ ಮಾಡುತ್ತಿದ್ದಾರೆಂದು ದೋ.ಸಾಕ್ಷಿ-1 ರವರು ದೋ.ಸಾಕ್ಷಿ-2 ಮತ್ತು 3 ರವರ ಸಮಕ್ಷಮ ಮತ್ತು ದೋ.ಸಾಕ್ಷಿ-4 ರಿಂದ 6 ರವರ ಸಹಾಯದಿಂದ ದಾಳಿ ಮಾಡಿ ಮೇಲ್ಕಂಡ ಮದ್ಯದ ಪೌಚುಗಳನ್ನು ವಶಪಡಿಸಿಕೊಳ್ಳಲಾಗಿರುತ್ತದೆ ತನಿಖೆಯಿಂದ ಕಂಡುಬಂದಿರುತ್ತದೆ ಎಂದು ಆರೋಪಿತರ ವಿರುದ್ಧ ಕಲಂ.32 ಮತ್ತು 34 ಕರ್ನಾಟಕ ರಾಜ್ಯ ಅಬಕಾರಿ ಕಾಯಿದೆ 1965 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧಕ್ಕಾಗಿ ಆರೋಪ ಪಟ್ಟಿ ಸಲ್ಲಿಸಿರುತ್ತಾರೆ.

9. ಅಭಿಯೋಜನೆಯು ಆರೋಪಿತರ ಮೇಲೆ ಆರೋಪಿಸಿರುವ ಆರೋಪವನ್ನು ಸಾಭೀತುಪಡಿಸುವ ಸಲುವಾಗಿ ಅಭಿಯೋಜನೆಯವರು ಸಾಕ್ಷ್ಯ ವಿಚಾರಣೆಯನ್ನು

ಆರಂಭಿಸಿದ್ದು, ಒಟ್ಟು 09 ಸಾಕ್ಷಿದಾರರ ಪೈಕಿ 6 ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿದ್ದು, ಚಾಸಾ.1, 2, 3, 6, 7 5, 4 ರವರನ್ನು ಪ್ರಾಸಾ.1 ರಿಂದ ಪ್ರಾಸಾ.6 ರಂತೆ ಸಾಕ್ಷಿದಾರರ ಹೇಳಿಕೆಗಳನ್ನು ನೀಡಿದ್ದು, ನಿಪಿ.1 ರಿಂದ ನಿಪಿ.6 ರಂತೆ ಅಭಿಯೋಜನೆಯ ದಾಖಲೆಗಳನ್ನು ಗುರುತಿಸಿಕೊಂಡಿದ್ದು, ಅದೇರೀತಿ **(1) 180** ಎಂ.ಎಲ್.ನ **106** ಓಲ್ಡ್ ಟವರಿನ್ ವಿಸ್ಕಿ ಪೌಚುಗಳು **(2) 90** ಎಂ.ಎಲ್.ನ ರಾಜಾ ವಿಸ್ಕಿ **96** ಪೌಚುಗಳು **(3) 180** ಎಂ.ಎಲ್.ನ ರಾಜಾ ವಿಸ್ಕಿ **17** ಪೌಚ್‌ಗಳು **(4) 330** ಎಂ.ಎಲ್.ನ **19** ನಾಕ್ ಔಟ್ ಬಾಟಲಿಗಳನ್ನು ಮು.ಮಾ.1 ರಿಂದ ಮು.ಮಾ.4 ಎಂದು ಗುರುತಿಸಿಕೊಳ್ಳಲಾಗಿರುತ್ತದೆ.

10. ಅಭಿಯೋಜನೆಯು ವಿಚಾರಣೆ ಆರಂಭಿಸಿದ್ದು, ಚಾಸಾ.6 ಸಂಗಮೇಶ ಎಸ್.ಜಿ ರವರು ದಾಳಿ ಕಾಲದಲ್ಲಿ ಭಾಗವಹಿಸಿದ ಪೋಲಿಸ್ ಪೇದೆಯಾಗಿದ್ದು, ಆ ಬಗ್ಗೆ ಪ್ರಾಸಾ.**1** ಎಂಬುದಾಗಿ ಮೌಖಿಕ ಸಾಕ್ಷ್ಯ ನೀಡಿದ್ದು ತಮ್ಮ ಮುಖ್ಯ ವಿಚಾರಣೆಯಲ್ಲಿ ನಾನು ಮತ್ತು ಚಾಸಾ**1** ಮತ್ತು ಪಂಚರ ಸಮಕ್ಷಮ ದಾಳಿ ಮಾಡಿರುತ್ತೇವೆ. ಅದರಲ್ಲಿ ಒಬ್ಬ ಆಸಾಮಿ ಓಡಿ ಹೋಗಿರುತ್ತಾನೆ. ಇನ್ನೊಬ್ಬ ಸಿಕ್ಕಿರುತ್ತಾನೆ ಸಿಕ್ಕಿರುವ ಆಸಾಮಿಯ ವಿಚಾರಣೆ ಮಾಡಲಾಗಿ ಜಿ ಆರ್ ಚಿಕ್ಕಣ್ಣ ತಂದೆ ರಂಗಪ್ಪ ಅಂತ ತಿಳಿಸಿರುತ್ತಾನೆ. ಓಡಿ ಹೋದ ಆಸಾಮಿಯ ಹೆಸರು ಕೇಳಲಾಗಿ ಮಂಜುನಾಥ ಯಾನೆ ಮಂಜಣ್ಣ ತಂದೆ ನಾಗರಾಜಪ್ಪ ಅಂತ ತಿಳಿಸಿರುತ್ತಾನೆ. ಮದ್ಯ ಮಾರಾಟ ಮಾಡಲು ಪರವಾನಿಗೆ ಇದೆಯಾ ಎಂದು ಕೇಳಲಾಗಿ ಇಲ್ಲ ಅಂತ ತಿಳಿಸಿರುತ್ತಾನೆ. ಪಂಚರ ಸಮಕ್ಷಮ ಅಲ್ಲಿ ಇದ್ದ ಮದ್ಯವನ್ನು ಪರಿಶೀಲನೆ ಮಾಡಲಾಗಿ **180** ಎಂ ಎಲ್ ನ **106** ಓಟಿವಿಸ್ಕಿಯ ಪೌಚಗಳು, **90** ಎಂ ಎಲ್ ನ **96** ರಾಜಾವಿಸ್ಕಿಯ ಪೌಚಗಳು, **180** ಎಂ ಎಲ್ ನ **17** ರಾಜಾವಿಕ್ಕಿಯ ಪೌಚಗಳು ಮತ್ತು **330** ಎಂ ಎಲ್ ನ **19** ನಾಕಔಟ್ ಬಿಯರ ಬಾಟಲುಗಳು ಇದ್ದವು. ಅವುಗಳಲ್ಲಿ ತಲಾ ಒಂದೊಂದನ್ನು ರಾಸಾಯನಿಕ ಪರೀಕ್ಷೆಗೊಸ್ಕರ ತೆಗೆದು ಬಿಳಿ ಬಟ್ಟೆಯಲ್ಲಿ ಸುತ್ತಿ ನಮ್ಮ ಇಲಾಖಾ ಮೊಹರನ್ನು ಹಾಕಿರುತ್ತೇವೆ. ಅವುಗಳನ್ನು ಪಂಚರ ಸಮಕ್ಷಮ ಅಮಾನತ್ತುಪಡಿಸಿ ಸದರಿ ಸ್ಥಳದಲ್ಲಿ ಪಂಚನಾಮೆ ಜರುಗಿಸಿರುತ್ತೇವೆ. ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ**1** ಸಹಿಯನ್ನು ನಿಪಿ**1** ಎ ಅಂತ ಗುರುತಿಸಲಾಗಿರುತ್ತದೆ ನ್ಯಾಯಾಲಯದ ಮುಂದೆ ಇರುವ ಮು.ಮಾ.ಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು

ಎಂ.ಓ-1 ರಿಂದ 4 ಅಂತ ಗುರುತಿಸಲಾಗಿರುತ್ತದೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಈ ಬಗ್ಗೆ ನಮ್ಮ ತನಿಖಾಧಿಕಾರಿಯ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದು ಸಾಕ್ಷವನ್ನು ನುಡಿದಿರುತ್ತಾರೆ.

11. ಅಭಿಯೋಜನೆಯು ಚಾಸಾ.2 ಕರಿಸಿದ್ದಯ್ಯ ಒಡೆಯರ ರವರು ಸ್ಥಳ ಪಂಚನಾಮೆಯ ಸಾಕ್ಷಿದಾರರಾಗಿದ್ದು, ಸದರಿಯವರನ್ನು ಪ್ರಾಸಾ-2 ಎಂದು ವಿಚಾರಣೆಗೊಳಪಡಿಸಿದ್ದು ತಮ್ಮ ಮುಖ್ಯ ವಿಚಾರಣೆಯಲ್ಲಿ 2016 ರಲ್ಲಿ ಹೊಳಲ್ಕೆರೆ ಪೋಲಿಸ್ ಠಾಣೆಯಲ್ಲಿ ಮಹಜರಿಗೆ ಸಹಿ ಮಾಡಿರುತ್ತೇನೆ ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಲ್ಲ, ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ಕೊಟ್ಟಿಲ್ಲ, ನ್ಯಾಯಾಲಯದ ಮುಂದೆ ಇರುವ ಮು.ಮಾ- ಗಳನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ ನಿಪಿ-1 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ, ಪೋಲಿಸರು ಅದನ್ನು ನನಗೆ ಓದಿ ಹೇಳಿಲ್ಲ ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿದರೆ ಗುರುತಿಸಲು ಅಗುವುದಿಲ್ಲ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ.

12. ಅಭಿಯೋಜನೆಯು ವಿಚಾರಣೆ ಆರಂಭಿಸಿದ್ದು, ಚಾಸಾ-1 ಮಹೇಂದ್ರ ಕುಮಾರ್ ಕೆ.ಹೆಚ್ ರವರು ಪಿರ್ಯಾಧಿ/ ಪೊಲೀಸ್ ಅಧಿಕಾರಿಯಾಗಿದ್ದು, ದಾಳಿ ಮಾಡಿದ ಅಧಿಕಾರಿಯಾಗಿದ್ದು. ಆ ಬಗ್ಗೆ ಪ್ರಾಸಾ.3 ಎಂಬುದಾಗಿ ತಮ್ಮ ಮೌಖಿಕ ಸಾಕ್ಷ್ಯವನ್ನು ನೀಡಿದ್ದು ಮುಖ್ಯ ವಿಚಾರಣೆಯಲ್ಲಿ, ದಿನಾಂಕಃ 25.02.2015 ರಂದು ಮಧ್ಯಾಹ್ನ 3.45 ಪಿ ಎಂ ಗಂಟೆಗೆ ಮಾನ್ಯ ಚಿತ್ರದುರ್ಗ ಜಿಲ್ಲಾ ಪೋಲೀಸ್ ಅಧೀಕ್ಷಕರರವರ ಖಚಿತ ಮಾಹಿತಿ ಮೇರೆಗೆ ನಾನು, ನಮ್ಮ ಸಿಬ್ಬಂದಿಯವರಾದ ಚಾ.ಸಾಃ 4 ರಿಂದ 6 ರವರುಗಳೆಲ್ಲರೂ ಸೇರಿ ನಮ್ಮ ಇಲಾಖಾ ಜೀಪಿನಲ್ಲಿ ಸಂಜೆ 4.00 ಗಂಟೆಗೆ ಚಿತ್ರದುರ್ಗವನ್ನು ಬಿಟ್ಟು 5.00 ಗಂಟೆಗೆ ಹೊಳಲ್ಕೆರೆಗೆ ಬಂದು ಇಬ್ಬರು ಪಂಚರನ್ನು ಬರಮಾಡಿಕೊಂಡು

ನಂತರ ನಾವೆಲ್ಲರೂ ಸಂಜೆ 5.30 ಗಂಟೆಗೆ ಹೊಳಲ್ಕೆರೆಯನ್ನು ಬಿಟ್ಟು 6.15 ಗಂಟೆಗೆ ಆರ್ ಗೊಲ್ಲರಹಳ್ಳಿ ಗ್ರಾಮಕ್ಕೆ ಹೋಗಿ ದೂರದಲ್ಲಿ ಜೀಪನ್ನು ನಿಲ್ಲಿಸಿ ಸ್ಥಳಕ್ಕೆ ಹೋಗಿ ನೋಡಲಾಗಿ ಯಾರೋ ಇಬ್ಬರು ಆಸಾಮಿಗಳು ಅಕ್ರಮವಾಗಿ ಸಾರ್ವಜನಿಕರಿಗೆ ಮದ್ಯ ಮಾರಾಟ ಮಾಡುತ್ತಿರುವುದು ಕಂಡುಬಂದಿದ್ದು, ನಾನು ಸಿಬ್ಬಂದಿಯವರೊಂದಿಗೆ ದಾಳಿಗೆ ಮುಂದಾದಾಗ ಸಾರ್ವಜನಿಕರು ಮತ್ತು ಒಬ್ಬ ಆಸಾಮಿಯು ಓಡಿ ಹೋಗಿದ್ದು, ಮತ್ತೊಂಬ್ಬ ಆಸಾಮಿಯು ಸಿಕ್ಕಿದ್ದು, ಆತನನ್ನು ವಿಚಾರಿಸಿದಾಗ ಆತ ತನ್ನ ಹೆಸರು ಜಿ ಆರ್ ಚಿಕ್ಕಣ್ಣ ಎಂದು ತಿಳಿಸಿದ್ದು ಒಡಿ ಹೋದ ಆಸಾಮಿಯ ಹೆಸರು ಮಂಜುನಾಥ ಅಲಿಯಾಸ್ ಮಂಜಪ್ಪ ತಂದೆ ನಾಗರಾಜಪ್ಪ ಎಂದು ತಿಳಿಸಿದ್ದು, ಸದರಿ ಆಸಾಮಿಯನ್ನು ಮದ್ಯ ಮಾರಾಟ ಮಾಡಲು ಸರ್ಕಾರದ ಪರವಾನಿಗೆ ಇದಿಯಾ ಎಂದು ಕೇಳಲಾಗಿ ಆತ ಇಲ್ಲ ಎಂದು ತಿಳಿಸಿದ್ದು, ನಂತರ ಪಂಚರ ಸಮಕ್ಷಮ ಸ್ಥಳದಲ್ಲಿ ದಾಸ್ತಾನು ಮಾಡಿದ್ದ ಮದ್ಯವನ್ನು ಪರಿಶೀಲಿಸಲಾಗಿ **180** ಎಂ ಎಲ್ ನ **106** ಓಲ್ಡ್ ಟವರಿನ ವಿಸ್ಕಿ ಪೌಚುಗಳು, **90** ಎಂ ಎಲ್ ನ **96** ರಾಜಾ ವಿಸ್ಕಿ ಪೌಚು, **180** ಎಂ ಎಲ್ ನ **17** ರಾಜಾ ವಿಸ್ಕಿ ಪೌಚುಗಳು, **330** ಎಂ ಎಲ್ **19** ನಾಕ್ ಔಟ್ ಬಾಟಲಿಗಳು ಇದ್ದು ಅವುಗಳ ಅಂದಾಜು ಬೆಲೆ ಒಟ್ಟು **10** ಸಾವಿರದ **100** ರೂಪಾಯಿ ಎಂದು ಅಂದಾಜಿಸಿದ್ದು, ನಂತರ ಅವುಗಳನ್ನು ಪಂಚರ ಸಮಕ್ಷಮ ಪಂಚನಾಮೆ ಮೂಲಕ ಅಮಾನತ್ತುಪಡಿಸಿಕೊಂಡು ಸಂಜೆ **7.00** ರಿಂದ **8.00** ಗಂಟೆಯವರೆಗೆ ಪಂಚನಾಮೆ ಕ್ರಮವನ್ನು ಜರುಗಿಸಿದ್ದು, ನಂತರ ಸದರಿ ಪಂಚನಾಮೆಯನ್ನು, ವಶಕ್ಕೆ ಪಡೆದ ಒಂದನೇ ಆರೋಪಿ ಮತ್ತು ಮುದ್ದೆ ಮಾಲುಗಳೊಂದಿಗೆ ರಾತ್ರಿ **8.30** ಗಂಟೆಗೆ ಹೊಳಲ್ಕೆರೆ ಪೋಲೀಸ್ ಠಾಣೆಗೆ ಬಂದು ಮುಂದಿನ ಕಾನೂನು ಕ್ರಮವನ್ನು ಜರುಗಿಸಲು ಠಾಣಾಧಿಕಾರಿಗಳಿಗೆ ವರದಿಯನ್ನು ನೀಡಿರುತ್ತೇನೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಮುದ್ದೇ ಮಾಲು **1** ರಿಂದ **4** ಎಂದು ಗುರುತಿಸಿರುತ್ತಾರೆ, **1**ನೇ ಆರೋಪಿಯನ್ನು, ಸ್ಥಳ

ಮಹಜರ್ ಮತ್ತು ವರದಿಯಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ.

13. ಅಭಿಯೋಜನೆಯು ಚಾಸಾ.3 ಪ್ರದೀಪ್ ಕುಮಾರ್ ರವರು ಸ್ಥಳ ಪಂಚನಾಮೆಯ ಸಾಕ್ಷಿದಾರರಾಗಿದ್ದು, ಸದರಿಯವರನ್ನು ಪ್ರಾಸಾ-4 ಎಂದು ವಿಚಾರಣೆಗೊಳಪಡಿಸಿದ್ದು ತಮ್ಮ ಮುಖ್ಯ ವಿಚಾರಣೆಯಲ್ಲಿ ನಿಪಿ-1 ರ ಪಂಚನಾಮೆ ಹಾಗೂ ನಿಪಿ-1(ಡಿ) ರಲ್ಲಿ ಸಹಿಯನ್ನು ಗುರತಿಸಲಾಗಿದ್ದು ಪೋಲೀಸರು ನನ್ನ ಮುಂದೆ ಯಾವುದೇ ಪಂಚನಾಮೆ ಕ್ರಮ ಜರುಗಿಸಿಲ್ಲ ಮತ್ತು ಯಾವುದೇ ವಸ್ತುವನ್ನು ಅಮಾನತ್ತುಪಡಿಸಿಕೊಂಡಿಲ್ಲ. ನಿಪಿಃ 1 ಕ್ಕೆ ಸುಮಾರು 9 ವರ್ಷಗಳ ಹಿಂದೆ ಪೊಲೀಸ್ ಠಾಣೆಯಲ್ಲಿ ಪೊಲೀಸರು ಹೇಳಿದ ಮೇರೆಗೆ ಸಹಿ ಮಾಡಿರುತ್ತೇನೆ. ನಿಪಿಃ 1 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ ಮತ್ತು ಪೋಲೀಸರು ಅದನ್ನು ಓದಿ ಹೇಳಿಲ್ಲ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ.

14. ಅಭಿಯೋಜನೆಯು ವಿಚಾರಣೆ ಆರಂಭಿಸಿದ್ದು, ಚಾಸಾ.5 ಹಾಲೇಶ್.ಜಿ ರವರು ದಾಳಿ ಕಾಲದಲ್ಲಿ ಭಾಗವಹಿಸಿದ ಪೋಲಿಸ್ ಪೇದೆಯಾಗಿದ್ದು, ಆ ಬಗ್ಗೆ ಪ್ರಾಸಾ.5 ಎಂಬುದಾಗಿ ಮೌಖಿಕ ಸಾಕ್ಷ್ಯ ನೀಡಿದ್ದು, ನಾವುಗಳು ಚಾಸಾ-1 ರವರೊಂದಿಗೆ ಇಲಾಖಾ ಜೀಪಿನಲ್ಲಿ ಸಂಜೆ 4 ಗಂಟೆಗೆ ಚಿತ್ರದುರ್ಗ ಬಿಟ್ಟು 5 ಗಂಟೆಗೆ ಹೊಳಲ್ಕೆರೆಗೆ ಬಂದು ಬಸ್ ನಿಲ್ದಾಣದ ಬಳಿ ಸಂಜೆ 5.15 ಗಂಟೆಗೆ ಚಾಸಾ2 ಮತ್ತು 3 ರವರನ್ನು ಬರಮಾಡಿಕೊಂಡು ಅವರಿಗೆ ದಾಳಿಯ ವಿಚಾರ ತಿಳಿಸಿ, ಅವರಿಗೆ ಪಂಚರಾಗಿ ಸಹಕರಿಸಿ ಎಂದು ಕೋರಿಕೊಂಡ ಮೇರೆಗೆ ಅವರುಗಳು ಒಪ್ಪಿಕೊಂಡಿರುತ್ತಾರೆ. ಅವರನ್ನು ಜೊತೆಗೆ ಕರೆದುಕೊಂಡು ಸಂಜೆ 5.30 ಗಂಟೆಗೆ ಹೊಳಲ್ಕೆರೆ ಬಿಟ್ಟು ಸಂಜೆ 6.15 ಗಂಟೆಗೆ ಆರ್. ಗೊಲ್ಲರಹಳ್ಳಿ ಗ್ರಾಮಕ್ಕೆ ಹೋಗಿ ಸ್ವಲ್ಪ ದೂರದಲ್ಲಿ ಜೀಪನ್ನು ನಿಲ್ಲಿಸಿ ಎಲ್ಲರೂ ಕೆಳಗೆ ಇಳಿದು ಕಾಲ್ನಡಿಗೆಯಲ್ಲಿ ನಡೆದುಕೊಂಡು ಸ್ಥಳದ ಬಳಿ ಹೋಗಿ ಎಲ್ಲರೂ ಮರೆಮಾಚಿಕೊಂಡು ನಿಂತು ನೋಡಲಾಗಿ ಯಾರೋ ಇಬ್ಬರು ಆಸಾಮಿಗಳು ಪೆಟ್ಟಿಗೆ ಅಂಗಡಿಯ ಮುಂಭಾಗದಲ್ಲಿ ರಟ್ಟಿನ ಬಾಕ್ಸ್ ಗಳಲ್ಲಿ ಮದ್ಯವನ್ನು ಇಟ್ಟುಕೊಂಡು ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವುದನ್ನು ಖಚಿತಪಡಿಸಿಕೊಂಡು

ಅವರುಗಳನ್ನು ನಾವು ಹಿಡಿಯಲು ಪ್ರಯತ್ನಿಸಿದಾಗ ಅವರು ತಪ್ಪಿಸಿಕೊಂಡು ಓಡಿ ಹೋಗಲು ಪ್ರಯತ್ನಪಟ್ಟವರಲ್ಲಿ ಒಬ್ಬ ಆಸಾಮಿಯನ್ನು ಹಿಡಿದುಕೊಂಡಿರುತ್ತೇವೆ. ಮತ್ತೊಬ್ಬ ಆಸಾಮಿ ಸಿಗದೆ ನಾವು ಹಿಡಿದುಕೊಂಡವನ ಹೆಸರು ವಿಳಾಸ ಕೇಳಲಾಗ ಜಿ.ಆರ್.ಚಿಕ್ಕಣ್ಣ ತಂದೆ ರಂಗಪ್ಪ, ಗೊಲ್ಲರಹಳ್ಳಿ ಗ್ರಾಮ ಎಂದು ತಿಳಿಸಿದ್ದು, ಓಡಿ ಹೋದ ಆಸಾಮಿಯ ಹೆಸರು ವಿಳಾಸ ಕೇಳಲಾಗಿ ಮಂಜುನಾಥ ಯಾನೆ ಮಂಜಪ್ಪ ತಂದೆ ನಾಗರಾಜಪ್ಪ, ಗೊಲ್ಲರಹಳ್ಳಿ ಗ್ರಾಮ ಎಂದು ತಿಳಿಸಿರುತ್ತಾನೆ. ನಂತರ ನಾವು ಆತನನ್ನು ಮದ್ಯ ಮಾರಾಟ ಮಾಡಲು ಸರ್ಕಾರದ ಪರವಾನಗಿ ಇದೆಯೇ ಎಂದು ಕೇಳಲಾಗಿ ಅವನು ಇಲ್ಲ ಎಂದು ತಿಳಿಸಿರುತ್ತಾನೆ. ನಂತರ ಮದ್ಯ ಬಾಟಲಿಗಳಿದ್ದ ರಟ್ಟಿನ ಬಾಕ್ಸ್ ಗಳನ್ನು ಪಂಚರ ಸಮಕ್ಷಮ ಪರಿಶೀಲಿಸಿ ನೋಡಲಾಗಿ ಸದರಿ ಬಾಕ್ಸ್ ಗಳಲ್ಲಿ 180 ಎಂ.ಎಲ್. ನಓಲ್ಡ್ ಟವರಿನ್ ವಿಸ್ಕಿಯ ಒಟ್ಟು 106 ಪೌಚುಗಳು, 90 ಎಂ.ಎಲ್. ನ 96 ರಾಜಾ ವಿಸ್ಕಿ ಪೌಚುಗಳು, 180 ಎಂ.ಎಲ್.ನ **17** ರಾಜಾ ವಿಸ್ಕಿ ಪೌಚುಗಳು, **330** ಎಂ.ಎಲ್.ನ **19** ನಾಕೌಟ್, ಬಾಟಲಿಗಳು ಇರುವುದು ಕಂಡುಬಂದಿರುತ್ತದೆ. ಸದರಿ ಮದ್ಯದ ಬಾಟಲಿಗಳಲ್ಲಿ ತಲಾ ಒಂದನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸುವ ಸಲುವಾಗಿ ಸ್ಯಾಂಪಲ್ ಗಾಗಿ ತೆಗೆದಿದ್ದು, ಅವುಗಳಿಗೆ ಬಿಳಿ ಬಟ್ಟೆಯಿಂದ ಹೊಲೆದು ದಾರದಿಂದ ಕಟ್ಟಿ ಪಿ.ಆರ್.ಒ. ಎಂಬ ಇಂಗ್ಲೀಷ್ ಅಕ್ಷರದಿಂದ ಸೀಲು ಮಾಡಿರುತ್ತೇವೆ. ಎಲ್ಲಾ ಮುದ್ದೆ ಮಾಲುಗಳ ಒಟ್ಟು ಬೆಲೆ **10100/-** ಆಗಿದ್ದು ಪಂಚನಾಮೆಯನ್ನು ಸಂಜೆ **7** ರಿಂದ **8** ಗಂಟೆಯವರೆಗೆ ವಿದ್ಯುತ್ ದೀಪದ ಬೆಳಕಿನಲ್ಲಿ ಜರುಗಿಸಿರುತ್ತೇವೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ.

15. ಚಾಸಾ.**9** ರವರಾದ ರಂಗಸ್ವಾಮಿ ರವರು ಅಂತಿಮ ತನಿಖಾಧಿಕಾರಿಯಾಗಿದ್ದು ಆ ಬಗ್ಗೆ ಪ್ರಾಸಾ.**6** ಎಂಬುದಾಗಿ ಮೌಖಿಕ ಸಾಕ್ಷ್ಯ ನೀಡಿದ್ದು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ 25.02.2015 ರಂದು ರಾತ್ರಿ 9 ಗಂಟೆಗೆ ನಾನು ಕರ್ತವ್ಯದಲ್ಲಿದ್ದಾಗ ಚಾಸಾ.**1** ರವರು ಠಾಣೆಗೆ ಹಾಜರಾಗಿ ಪಂಚನಾಮೆ, ಮುದ್ದೆಮಾಲು ಮತ್ತು ಆರೋಪಿತನೊಂದಿಗೆ ನೀಡಿದ ವರದಿಯನ್ನು ಸ್ವೀಕರಿಸಿಕೊಂಡು ಠಾಣಾ ಮೊಕದ್ದಮೆ ಸಂಖ್ಯೆ **74/2015** ರಂತೆ ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗೆ ವರದಿ ಮಾಡಿರುತ್ತೇನೆ. ಸಾಕ್ಷಿ

ವರದಿಯಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ನಿಪಿ. 3(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ಪ್ರ.ವ. ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.5(ಎ), ಎಂದು ಗುರುತಿಸಲಾಯಿತು. ಅಮಾನತ್ತುಪಡಿಸಿಕೊಂಡ ಮುದ್ದೆಮಾಲನ್ನು ಮಾಲುಪಟ್ಟಿಯಲ್ಲಿ ಅಳವಡಿಸಿ ನ್ಯಾಯಾಲಯಕ್ಕೆ ವರದಿ ಮಾಡಿರುತ್ತೇನೆ. ಆರೋಪಿತನನ್ನು ದಸ್ತಗಿರಿ ಮಾಡಿ, ದಸ್ತಗಿರಿ ಕ್ರಮ ಅನುಸರಿಸಿ ಸಿಬ್ಬಂಧಿಯ ಮೂಲಕ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಿ.26.02.2015 ರಂದು ಚಾಸಾ.2 ರಿಂದ 5 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿ.12.03.2015 ರಂದು ಸಾಕ್ಷಿದಾರರಾದ ಚಾಸಾ.7 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿ.11.03.2015 ರಂದು ಅಮಾನತ್ತುಪಡಿಸಿಕೊಂಡ ಮದ್ಯದ ಮಾಲನ್ನು ಅಧಿಕಾರಿ ಇಲಾಖೆ, ಚಿತ್ರದುರ್ಗ ರವರಿಗೆ ಹಸ್ತಾಂತರಿಸಿ ಆ ಬಗ್ಗೆ ಸ್ವೀಕೃತಿಯನ್ನು ಪಡೆದಿರುತ್ತೇನೆ. ಡಿ.18.04.2015 ರಂದು ರಾಸಾಯನಿಕ ಪರೀಕ್ಷಾ ವರದಿಯನ್ನು ಸ್ವೀಕರಿಸಿರುತ್ತೇನೆ. ವರದಿಯನ್ನು ನಿಪಿ. ಎಂದು, ಸಾಕ್ಷಿಯ ಸಹಿಯನ್ನು ನಿಪಿ.6(ಎ) ಎಂದು ಗುರುತಿಸಲಾಯಿತು, ಆರೋಪಿತರ ಆರೋಪ ರುಜುವಾತಾದ ಹಿನ್ನಲೆಯಲ್ಲಿ ಆರೋಪಿತರ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ.

16. ಅಭಿಯೋಜನೆ ಪರವಾಗಿ ಸಹಾಯಕ ಸರ್ಕಾರಿ ಅಭಿಯೋಜಕರು ತಮ್ಮ ವಾದವನ್ನು ಮಂಡಿಸಿದ್ದು ತಮ್ಮ ವಾದ ಮಂಡನೆ ಕಾಲದಲ್ಲಿ ಆರೋಪಿತರು ಕರ್ನಾಟಕ ಅಬಕಾರಿ ಕಾಯಿದೆ ಕಲಂ.32 ಮತ್ತು 34 ಉಲ್ಲಂಘನೆಯಾಗಿದ್ದು ಆರೋಪಿತರು ಶಿಕ್ಷಾರ್ಹ ಅಪರಾಧ ಎಸೆಗಿರುವುದರಿಂದ ಅಭಿಯೋಜನೆಯು ಪ್ರಾಸಾ.1 ರಿಂದ ಪ್ರಾಸಾ.6 ಸಾಕ್ಷಿದಾರರುಗಳನ್ನು ವಿಚಾರಣೆಗೆ ಒಳಪಡಿಸಿದ್ದು ಅಭಿಯೋಜನೆ ಪ್ರಕರಣಕ್ಕೆ ಪೂರಕ ಉತ್ತರ ನೀಡಿರುತ್ತಾರೆ ಹಾಗೂ ನಿಪಿ.1 ರಿಂದ ನಿಪಿ.6 ದಾಖಲೆಗಳ ಪುಷ್ಠೀಕರಿಸುವಂತೆ ಉತ್ತರ ನೀಡಿದ್ದು ಮು.ಮಾ-01 ರಿಂದ 4 ನ್ನು ಗುರುತಿಸಿಕೊಳ್ಳಲಾಗಿರುತ್ತದೆ, ಚಾಸಾ-6, 1, 5 ಮತ್ತು 9 ರವರು ಪ್ರಕರಣಕ್ಕೆ ಪೂರಕವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಆರೋಪ ರುಜುವಾತುವಾಗಿರುವುದರಿಂದ 2 ನೇ ಆರೋಪಿತನನ್ನು ಸೂಕ್ತ ರೀತಿಯಲ್ಲಿ ಶಿಕ್ಷಿಸುವಂತೆ ಪ್ರಾರ್ಥಿಸಿರುತ್ತಾರೆ.

17. 2 ನೇ ಆರೋಪಿತನ ಪರ ವಕೀಲರು ಅಭಿಯೋಜನೆಯ ವಾದಮಂಡನೆಯ ವಿರುದ್ಧವಾಗಿ ಆರೋಪಿಯು ಅಭಿಯೋಜನೆಯು ಆರೋಪಿಸಿರುವಂತ ಯಾವುದೇ ಅಪರಾಧವನ್ನು ಮಾಡಿರುವುದಿಲ್ಲ ಅಬಕಾರಿ ಪ್ರಕರಣಗಳ ಅಂಕಿ-ಅಂಶಗಳಿಗೋಸ್ಕರ 2 ನೇ ಆರೋಪಿತನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಕಥೆಯನ್ನು ಸೃಷ್ಟಿಸಿ ಆರೋಪಿತರನ್ನು ಬಲಿಪಶುವನ್ನಾಗಿ ಮಾಡಿ ಪ್ರಕರಣದಲ್ಲಿ ಸಿಲುಕಿಸಿದ್ದಾರೆ, ಮುಂದುವರೆದು ಆರೋಪಿತರ ದೈಹಿಕ ಚಹರೆ, ಆಕೆಯು ಧರಿಸಿದ್ದ ಬಟ್ಟೆ ಹಾಗೂ ಸ್ಥಳದಲ್ಲಿ ಸದರಿ ವಶಪಡಿಸಿಕೊಂಡ ಮಧ್ಯವನ್ನು ಎಲ್ಲಿಂದ ತರಲಾಗಿತ್ತು ಎಂದು ತನಿಖಾಧಿಕಾರಿ ಅನ್ವೇಷಣೆ ಮಾಡಿರುವುದಿಲ್ಲ ಹಾಗೂ 2 ನೇ ಆರೋಪಿತನಿಂದ ಆರೋಪ ಪಟ್ಟಿಯಲ್ಲಿ ಆರೋಪಿಸಿರುವಂತೆ ಯಾವುದೇ ಮದ್ಯವನ್ನು ವಶಪಡಿಸಿಕೊಂಡಿರುವುದಿಲ್ಲ ಹಾಗೂ ಸ್ಥಳ ಮಹಜರ್/ಅಮಾನತು ಮಹಜರ್ ಸಾಕ್ಷಿಗಳು ಅಭಿಯೋಜನೆ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷಿಗಳಾಗಿದ್ದು ಸ್ವತಂತ್ರ ಸಾಕ್ಷಿಗಳಿಂದ ಅಭಿಯೋಜನೆಯ ಪ್ರಕರಣವನ್ನು ರುಜುವಾತುಪಡಿಸುವಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದು, 2 ನೇ ಆರೋಪಿತನ ವಿರುದ್ಧ ಆರೋಪವನ್ನು ಸಾಬೀತುಪಡಿಸುವಲ್ಲಿ ಅಭಿಯೋಜನೆಯು ಸಂಪೂರ್ಣವಾಗಿ ವಿಫಲವಾಗಿದ್ದು 2 ನೇ ಆರೋಪಿತನನ್ನು ನಿರ್ದೋಷಿ ಎಂದು ಪರಿಗಣಿಸಿ ಪ್ರಕರಣದಿಂದ ದೋಷಮುಕ್ತನನ್ನಾಗಿ ಖುಲಾಸೆಗೊಳಿಸಬೇಕೆಂದು ವಾದ ಮಂಡಿಸಿ ಪ್ರಾರ್ಥಿಸಿರುತ್ತಾರೆ.

18. ಈ ಮೇಲ್ಕಂಡ ಅಭಿಯೋಜನೆಯ ಪ್ರಕರಣದಲ್ಲಿ ಅಭಿಯೋಜನೆಯ ಪರ ವಿಚಾರಣೆಗೊಳಪಟ್ಟ ಸಾಕ್ಷಿದಾರರ ಮೌಖಿಕ ಹೇಳಿಕೆ ಹಾಗೂ ಪ್ರಾಸಾ.1 ರಿಂದ ಪ್ರಾಸಾ.6 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ನಿಪಿ.1 ರಿಂದ ನಿಪಿ.6 ರಂತೆ ದಾಖಲೆಗಳನ್ನು ಗುರುತಿಸಿಕೊಂಡಿದ್ದು ಮತ್ತು ಮು.ಮಾ.1 ರಿಂದ ಮು.ಮಾ.4 ಗಳನ್ನು ಗುರುತಿಸಿಕೊಂಡಿರುತ್ತಾರೆ. ಅಭಿಯೋಜನೆಯ ದಾಖಲೆಗಳಾದ ನಿಪಿ-1 ಸ್ಥಳ ಮಹಜರ್, ನಿಪಿ-2 ಚಾಸಾ-2 ರವರ ಹೇಳಿಕೆ, ನಿಪಿ-3 ದೂರು, ನಿಪಿ-4 ಚಾಸಾ-3 ರವರ ಹೇಳಿಕೆ, ನಿಪಿ-5 ಪ್ರಥಮ ವರ್ತಮಾನ ವರದಿ, ನಿಪಿ-6 ರಾಸಾಯಿನಿಕ ವರದಿಗಳಾಗಿರುತ್ತವೆ. ಮೇಲ್ಕಂಡ ಅಭಿಯೋಜನೆಯವರು ಗುರುತಿಸಿಕೊಂಡಿರುವ ದಾಖಲೆಗಳಲ್ಲಿ ನಿಪಿ-2 ರಿಂದ ನಿಪಿ-6

ಸಾಕ್ಷಿದಾರರು ನಿರಾಕರಿಸಿದ ಹೇಳಿಕೆಗಳಾಗಿದ್ದು 2 ನೇ ಆರೋಪಿತನ ಮೇಲಿನ ಆರೋಪ ರುಜುವಾತಿಗೆ ಪೂರಕವಾಗಿರುವುದಿಲ್ಲ.

19. ಈ ಮೇಲ್ಕಂಡ ಅಭಿಯೋಜನೆಯು ಸಾಕ್ಷಿಗಳ ವಿಚಾರಣೆಗಳನ್ನು ಗಮನಿಸಿದಾಗ್ಗ ಅಭಿಯೋಜನೆಯ ವಿಚಾರಣೆಯ ಮೌಖಿಕ ಹೇಳಿಕೆ ಮತ್ತು ಅಭಿಯೋಜನೆಯು ಗುರುತಿಸಿಕೊಂಡಿರುವ ದಾಖಲಾತಿ ನಿಪಿ.1 ರಿಂದ ನಿಪಿ.6 ನ್ನು ಕೂಲಂಕುಷವಾಗಿ ಗಮನಿಸಿದಾಗ್ಗ ಅಭಿಯೋಜನೆಯು 2 ನೇ ಆರೋಪಿತನ ಮೇಲೆ ದಿ.25/02/2025 ರಂದು ಸಂಜೆ 6-15 ರ ವೇಳೆ ಮೃತ 1 ನೇ ಆರೋಪಿಯೊದಿಗೆ ಹೊಳಲ್ಕೆರೆ ಪೊಲೀಸ್ ಠಾಣೆ ವ್ಯಾಪ್ತಿ ಆರ್. ಗೊಲ್ಲರಹಳ್ಳಿ ಸರ್ಕಾರಿ ಪ್ರಾಥಮಿಕ ಶಾಲೆಯ ಪಕ್ಕದ ಪಟ್ಟಿಗೆ ಅಂಗಡಿಯಲ್ಲಿ ನಿಪಿ-1 ರಂತೆ ಮಹಜರ್ ಕ್ರಮ ಜರುಗಿಸಿ ಮದ್ಯದ ವಸ್ತುಗಳನ್ನು ಮಾರಾಟ ಮಾಡುತ್ತಿದ್ದರು, 2 ನೇ ಆರೋಪಿ ಸ್ಥಳದಿಂದ ಓಡಿ ಹೋಗಿರುತ್ತಾನೆಂದು ಅಭಿಯೋಜನೆಯ ಪ್ರಕರಣವಾಗಿದ್ದು, 2 ನೇ ಆರೋಪಿ ಸ್ಥಳದಲ್ಲಿ ಇದ್ದ ಬಗ್ಗ ಪ್ರಾಸಾ-2 ಮತ್ತು 4 ದಾಳಿ ವೇಳೆ ಭಾಗವಹಿಸಿದ ಅಮಾನತ್ತು ಮಹಜರ್ ಸಾಕ್ಷಿದಾರರಾಗಿದ್ದು, ಪ್ರಾಸಾ-1, 3, 5 ರವರ ಜೊತೆ ದಾಳಿ ಮಾಡಿದಾಗ ಹಾಜರಿದ್ದ ಸಾಕ್ಷಿಗಳಾಗಿದ್ದು ಇವರು ಸ್ವತಂತ್ರ ಸಾಕ್ಷಿಗಳಾಗಿದ್ದು, ಅಮಾನತ್ತು ಪಂಚನಾಮೆಯ ಬಗ್ಗ ಓಡಿ ಹೋದ ಎಂದು ಹೇಳಲಾದ 2 ನೇ ಆರೋಪಿತನ ಗುರುತಿಸುವಿಕೆ ಬಗ್ಗ ಯಾವುದೇ ಹೇಳಿಕೆ ನೀಡಿರುವುದಿಲ್ಲ, ಅಮಾನತ್ತು ತಮ್ಮ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ, ಪೋಲಿಸರ ಮುಂದೆ ಹೇಳಿಕೆ ನೀಡಿರುವುದಿಲ್ಲ ಅಮಾನುತ್ತು ಮಹಜರ್ ನ್ನು ಓದಿ ಹೇಳಿಲ್ಲ ಎಂದು ನಿಪಿ-1 ಅಮಾನತ್ತು ಮಹಜರ್ ನಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ, ಮುದ್ದೇ ಮಾಲುಗಳನ್ನು ಗುರುತಿಸಲಾಗುವುದಿಲ್ಲ ಎಂದು ಹೇಳಿಕೆ ನೀಡಿದ್ದು ಅಮಾನತ್ತು ಮಹಜರ್ ಬಗ್ಗ 2 ನೇ ಆರೋಪಿ ಮತ್ತು ಮುದ್ದೇ ಮಾಲುಗಳ ಅಮಾನತ್ತುಪಡಿಸಿಕೊಂಡು ಗುರುತಿಸುವ ಬಗ್ಗ ಅಭಿಯೋಜನೆ ಪ್ರಾಸಾ-2 ಮತ್ತು ಪ್ರಾಸಾ-4 ರವರ ಮೂಲಕ ರುಜುವಾತುಪಡಿಸುವಲ್ಲಿ ವಿಫಲವಾಗಿರುತ್ತದೆ.

20. ಪ್ರಾಸಾ-1 ರವರು ಪ್ರಾಸಾ-3 ರವರ ಜೂತೆ ದಾಳಿಯ ಕಾಲದಲ್ಲಿ ಭಾಗವಹಿಸಿದ ಪೋಲಿಸ್ ಪೇದೆಯಾಗಿದ್ದು ತಮ್ಮ ಮುಖ್ಯ ವಿಚಾರಣೆಯಲ್ಲಿ 2 ನೇ ಆರೋಪಿ ಓಡಿ ಹೋದ

ಬಗ್ಗೆ ಸಾಕ್ಷ್ಯವನ್ನು ನುಡಿದಿರುತ್ತಾರೆ, ಮುಂದುವರೆ ಪಾಟೀ ಸವಾಲಿನಲ್ಲಿ ಪಂಚ ಸಾಕ್ಷಿಗಳಿಗೆ ಮಹಜರ್ ಗೆ ಬರಬೇಕೆಂದು ನೋಟಿಸ್ ನೀಡಿರುವುದಿಲ್ಲ, ಸ್ಥಳದಲ್ಲಿದ್ದವರನ್ನು ಮಹಜರ್ ಸಾಕ್ಷಿದಾರರನ್ನಾಗಿ ಮಾಡಿರುವುದಿಲ್ಲ ಎಂದ ಸೂಚಿಸಿದ ಪ್ರಶ್ನೆಗೆ ಮೇಲಾಧಿಕಾರಿಗಳಿಗೆ ಗೊತ್ತು ಸದರಿ ದಿನದಂದು ಕತ್ತಲಿಲ್ಲ ಮುಖ ಕಂಡಿತು ಎಂಬ ಪ್ರಶ್ನೆಗೆ ಒಬ್ಬನು ಓಡಿ ಹೋಗಿರುತ್ತಾನೆ ಇನ್ನೊಬ್ಬರ ಮುಖ ಕಂಡಿದ್ದರಿಂದ ಹಿಡಿದುಕೊಂಡಿರುತ್ತೇವೆ ಎಂದು ನುಡಿದಿರುತ್ತಾರೆ, ಓಡಿ ಹೋದ ವ್ಯಕ್ತಿಯ ಮುಖ ಚಹರೆ, ದೈಹಿಕ ಚಹರೆ ಬಗ್ಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ಓಡಿ ಹೋದ ವ್ಯಕ್ತಿ ಸದರಿ ಅಂಗಡಿಯ ಮಾಲಿಕನೇ ಅಥವಾ ವ್ಯಾಪಾರ ಮಾಡುತ್ತಾನೆಂಬ ಬಗ್ಗೆ ತನಿಖಾ ದಾಖಲೆಗಳಲ್ಲಿ ಎಲ್ಲಿ ಉಲ್ಲೇಖವಿರುವುದಿಲ್ಲ, ಅದೇ ರೀತಿ ಸದರಿ ಅಂಗಡಿಯು 2 ನೇ ಆರೋಪಿಗೆ ಸೇರಿತು ಎಂಬ ಬಗ್ಗೆ ತನಿಖಾಧಿಕಾರಿ ಅಂಗಡಿ ನಡೆಸುತ್ತಿದ್ದ ಬಗ್ಗೆ ಯಾವುದೇ ಪರವಾನಗಿಯನ್ನು ಗ್ರಾಮ ಪಂಚಾಯಿತಿಯಿಂದ ಪಡೆದುಕೊಂಡಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ, ಆದ್ದರಿಂದ ಆರೋಪಿ ಸದರಿ ಅಂಗಡಿ ನಡೆಸುತ್ತಿದ್ದನು ಎಂಬ ಬಗ್ಗೆ ಸ್ಪಷ್ಟ ಪುರಾವೆಗಳಿರುವುದಿಲ್ಲ,

21. ಪ್ರಾಸಾ-3 ರವರು ಈ ಪ್ರಕರಣದಲ್ಲಿ ದಾಳಿ ಮಾಡಿದ ಬಗ್ಗೆ ಪ್ರಮುಖ ಅಧಿಕಾರಿಯಾಗಿದ್ದುದಾಳಿಯ ಬಗ್ಗೆ ಮು.ಮಾ-01 ರಿಂದ 4 ನ್ನು ಅಮಾನತ್ತುಪಡಿಸಿಕೊಂಡ ಬಗ್ಗೆ ಸಾಕ್ಷ್ಯವನ್ನು ನುಡಿದಿರುತ್ತಾರೆ. ತಮ್ಮ ಪಾಟೀ ಸವಾಲಿನಲ್ಲಿ ನಾವು ಸ್ಥಳಕ್ಕೆ ಹೋದಾಗ ಸಾಕಷ್ಟು ಜನರು ಇದ್ದರು ಎಷ್ಟು ಜನ ಎಂದು ಹೇಳಲಾಗುವುದಿಲ್ಲ ನಾವು ಸ್ಥಳಕ್ಕೆ ಹೋದಾಗ ಕೆಲವೊಂದು ಜನರು ಮದ್ಯ ಸೇವನೆ ಮಾಡುತ್ತಿದ್ದರು ನಾನು ದಾಳಿ ಮಾಡಿದಾಗ ಅವರು ಓಡಿ ಹೋಗಿದ್ದರಿಂದ ಅವರನ್ನು ವಿಚಾರಿಸಿರುವುದಿಲ್ಲ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ.

22. ಮುಂದುವರೆದು ಪಾಟೀ ಸವಾಲಿನಲ್ಲಿ ದಾಳಿ ಸ್ಥಳದಲ್ಲಿ ಜಗ್ ಲೋಟ ಮತ್ತು ನೀರಿನ ಲೋಟಗಳು ಸಿಗುತ್ತಿದ್ದವು ಎಂದು ಸೂಚಿಸಿದ ಪ್ರಶ್ನೆಗೆ ಆ ರೀತಿಯ ಯಾವುದೇ ವಸ್ತುಗಳು ಅಲ್ಲಿ ಕಂಡು ಬರಲಿಲ್ಲ ಎಂದು ನುಡಿದಿರುತ್ತಾರೆ, ಹಣ ದೊರತ ಬಗ್ಗೆ ಸೂಚಿಸಿದ ಪ್ರಶ್ನೆಗೆ ಇನ್ನೊಬ್ಬ ಅಸಾಮಿ ಹಣವನ್ನು ತೆಗೆದುಕೊಂಡು ಹೋಗಿರುತ್ತಾನೆ ಎಂದು 1 ನೇ ಆರೋಪಿ ತಿಳಿಸಿದನು ಎಂದು ಪಾಟೀ ಸವಾಲಿನಲ್ಲಿ ಉತ್ತರಿಸಿದ್ದು ಪ್ರಸ್ತುತ

ಆರೋಪಿಯು ಹಣವನ್ನು ತೆಗೆದುಕೊಂಡ ಹೋದ ಬಗ್ಗೆ ಈ ಸಾಕ್ಷಿಯು ನೋಡಿರುವುದಿಲ್ಲ ಸ್ಥಳದಲ್ಲಿ ಓಡಿ ಹೋದ ವ್ಯಕ್ತಿಯ ಬಗ್ಗೆ ವಿಚಾರಿಸಿರುವುದಿಲ್ಲ 1 ನೇ ಆರೋಪಿಯ ನಂಬರ್ಲಹವಲ್ಲದ ಸ್ವ ಇಚ್ಛಾ ಹೇಳಿಕೆಯ ಮೇರೆಗೆ 2 ನೇ ಆರೋಪಿಯನ್ನು ಈ ಪ್ರಕರಣದಲ್ಲಿ ಆರೋಪಿಯನ್ನಾಗಿಸಿ ತೋರ್ಪಡಿಸಿದ್ದು ಸ್ಥಳದಲ್ಲಿ 2 ನೇ ಆರೋಪಿ ಮದ್ಯ ಮಾರಾಟ ಮಾಡುತ್ತಿದ್ದ ಅಕ್ಕ-ಪಕ್ಕದ ಅಂಗಡಿಯ ಮಾಲೀಕರು ಸ್ಥಳೀಯ ಮದ್ಯ ಕೊಂಡುಕೊಳ್ಳುತ್ತಿದ್ದ ಗಿರಾಕಿಗಳು ವಿಚಾರಣೆ ಮಾಡಿ ಹೇಳಿಕೆ ಪಡೆದಿರುವುದಿಲ್ಲ ಆರೋಪಿ **2** ರವರು ಸ್ವಾಮ್ಯಕ್ಕೆ ಸೇರಿದ ಅಂಗಡಿ ಇದೆ ಎಂಬ ಬಗ್ಗೆ ಅಂಗಡಿ ನಡೆಸಲು ಗ್ರಾಮ ಪಂಚಾಯಿತಿ ಪರವಾನಗಿ ಹೊಂದಿದ್ದರು ಎಂಬ ಬಗ್ಗೆ ಯಾವುದೇ ಧೃಡ ಮತ್ತು ಸ್ಪಷ್ಟ ಪುರಾವೆಗಳಿರುವುದಿಲ್ಲ,

23. ಅದೇ ರೀತಿ ಪ್ರಾಸಾ-5 ರವರು ದಾಳಿ ವೇಳೆ ಪ್ರಾಸಾ-**3** ರವರ ಹೇಳಿಕೆ ದಾಳಿಯಲ್ಲಿ ಭಾಗವಹಿಸಿದ ಪೋಲಿಸ್ ಪೇದೆಯಾಗಿದ್ದು, ದಾಳಿಯ ಬಗ್ಗೆ ಸಾಕ್ಷ್ಯವನ್ನು ನುಡಿದಿದ್ದು ತಮ್ಮ ಪಾಟೀ ಸವಾಲಿನಲ್ಲಿ ಪಟ್ಟಿಗೆ ಅಂಗಡಿಯ ಚೆಕ್ಕು ಬಂದಿ ಹೇಳಲಾಗುವುದಿಲ್ಲ ನಿಪಿ-**1** ನ್ನು ಯಾರು ಬರೆದರು ಎಂದು ಹೇಳಲಾಗುವುದಿಲ್ಲ, ಘಟನಾ ಸ್ಥಳದ ಯಾವ ಸ್ಥಳದಲ್ಲಿ ನಿಂತು ಮರೆ ಮಾಚಿ ನೋಡಿದೆವು ಎಂದು ಹೇಳಲಾಗುವುದಿಲ್ಲ. ಘಟನಾ ಸ್ಧ,ಳಕ್ಕೆ ಮದ್ಯವನ್ನು ಖರೀದಿಸುವ ಯಾವುದೇ ಗಿರಾಕಿಗಳು ಅಲ್ಲಿ ಇರಲಿಲ್ಲ, ನಿಪಿ-**1** ರಲ್ಲಿ ನಾವು ವಶಪಡಿಸಿಕೊಂಡ ಮದ್ಯದ ಪೌಚುಗಳ ತಯಾರಿಕಾ ದಿನಾಂಕ ಇಸವಿ ಬ್ಯಾಚ್ ನಂಬರ್ ನಮೂದಿಸಿರುವುದಿಲ್ಲ ಬಿಳಿ ಚೀಲದ ಮೇಲಿರುವ ಗುರುತುಗಳ ಬಗ್ಗೆ ಮಹಜರ್ ನಲ್ಲಿ ನಮೂದಿಸಿಕೊಂಡಿರುವುದಿಲ್ಲ ಈ ಮೇಲ್ಕಂಡ ಎಲ್ಲಾ ಸಾಕ್ಷಿದಾರರ ಪಾಟೀ ಸವಾಲಿನಲ್ಲಿ ಉತ್ತರಗಳನ್ನು ಗಮನಿಸಿದ್ದಾಗ್ಗೆ ಸ್ಥಳದ ಚೆಕ್ಕು ಬಂದಿ ನಿಪಿ-**1** ನ್ನು ಬರೆದಿರುವ ಬಗ್ಗೆ, ಸ್ಥಳದ ಚೆಕ್ಕು ಬಂದಿ ಸ್ಪಷ್ಟ ಉತ್ತರ ನೀಡದೇ ಇರುವುದರಿಂದ ಈ ಸಾಕ್ಷಿ ದಾಳಿಯಲ್ಲಿ ಭಾಗವಹಿಸಿದ್ದರು ಎಂಬ ಬಗ್ಗೆ ಅನುಮಾನ ವ್ಯಕ್ತವಾಗುತ್ತದೆ ಅದೇ ರೀತಿ ಈ ಸಾಕ್ಷಿ ಸ್ಥಳಕ್ಕೆ ಮದ್ಯವನ್ನು ಖರೀದಿಸುವ ಸ್ಥಳದಲ್ಲಿ ಯಾವುದೇ ಗಿರಾಕಿಗಳು ಇರಲಿಲ್ಲ ಪ್ರಾಸಾ-**1** ಮತ್ತು 3 ರವರು ಸ್ಥಳಕ್ಕೆ ಹೋದಾಗ ಸಾಕಷ್ಟು ಜನರು ಇದ್ದರು ಮದ್ಯ ಖರೀದಿಸುತ್ತಿದ್ದರು ಎಂದು ಹೇಳಿದ್ದು ಈ ಸಾಕ್ಷಿಯ ಹೇಳಿಕೆ ದಾಳಿಯಲ್ಲಿಭಾಗವಹಿಸಿದ ಇತರೆ

ಅಧಿಕಾರಿಗಳ ಹೇಳಿಕೆಗೆ ವ್ಯತಿರಿಕ್ತವಾಗಿದ್ದು ನಂಬರ್ಲಹವಾಗಿರುವುದಿಲ್ಲ.

24. ಪ್ರಾಸಾ-6 ಈ ಪ್ರಕರಣದಲ್ಲಿ ಚಾಸಾ-1 ರವರಿಂದ ವರದಿಯೊಂದಿಗೆ ಮುದ್ದೇ ಮಾಲು ಮತ್ತು ಪಂಚನಾಮೆ, 1 ನೇ ಆರೋಪಿಯನ್ನು ವಶಕ್ಕೆ ನೀಡಿ ಮೇರೆಗೆ ಪ್ರ. ವ. ವರದಿಯನ್ನು ದಾಖಲಿಸಿಕೊಂಡು ಚಾಸಾ-2 ರವರಿಂದ 5, 7 ರವರ ಹೇಳಿಕೆಗಳನ್ನು ಪಡೆದುಕೊಂಡು ಮದ್ಯದ ವಸ್ತುಗಳನ್ನು ಅಬಕಾರಿ ಇಲಾಖೆಗೆ ನೀಡಿ ಪ್ರಯೋಗಲಯದಿಂದ ರಾಸಾಯಿನಿಕ ವರದಿಯನ್ನು ಸ್ವೀಕರಿಸಿ ಆರೋಪಿತರ ವಿರುದ್ದ ದೋಷರೋಪಣಾ ಪಟ್ಟಿಯನ್ನು ಸಲ್ಲಿಸಿರುವ ಬಗ್ಗೆ ಸಾಕ್ಷ್ಯವನ್ನು ನುಡಿದಿರುತ್ತಾರೆ. ತಮ್ಮ ಪಾಟೀ ಸವಾಲಿನಲ್ಲಿ ನಾನು ಘಟನಾ ಸ್ಥಳಕ್ಕೆ ಭೇಟಿ ನೀಡಿರುವುದಿಲ್ಲ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಈ ಸಾಕ್ಷಿಯು ಅಮಾನತ್ತುಪಡಿಸಿಕೊಳ್ಳಲಾಯಿತು ಎಂದು ಹೇಳಲಾದ ವಸ್ತುಗಳನ್ನು ರಾಸಾಯಿನಿಕ ಪರೀಕ್ಷೆಗೆ ಕಳುಹಿಸಿಲಾಗಿದ್ದು ಎಂದು ಹೇಳಿಕೆ ನೀಡಿದ್ದು ರಾಸಾಯಿನಿಕ ಪರೀಕ್ಷೆಗೆ ಕಳುಹಿಸುವ ಪೂರ್ವದಲ್ಲಿ ಸದರಿ ಅಮಾನುತ್ತಪಡಿಸಿಕೊಂಡ ವಸ್ತುಗಳ ತಯಾರಿಕಾ ದಿನಾಂಕ ಬ್ಯಾಚ್ ನಂಬರ್ ಕ್ರಮ ಸಂಖ್ಯೆ ಇವುಗಳನ್ನು ನಮೂದಿಸದೇ ಇರುವುದು ಕಂಡು ಬಂದಿದ್ದು, ರಾಸಾಯಿನಿಕ ಪರೀಕ್ಷಾ ವರದಿಯಲ್ಲಿ ಸಹಾ ಅಮಾನತ್ತುಪಡಿಸಿಕೊಂಡ ವಸ್ತುಗಳ ಬಗ್ಗೆ ನಿರ್ಧಿಷ್ಟ ಗುರುತು ಇರುವುದಿಲ್ಲ ಅದೇ ರೀತಿ ನಿಪಿ-1 ಅಮಾನತ್ತು ಮಹಜರ್ ಪರೀಶೀಲಿಸಿದ್ದಾಗ್ಗೆ ಅದರಲ್ಲಿಯೂ ಸಹಾ ಅಮಾನತ್ತುಪಡಿಸಿಕೊಂಡ ವಸ್ತುಗಳಲ್ಲಿ ಯಾವ ಕ್ರಮ ಸಂಖ್ಯೆಯ ಯಾವ ಮದ್ಯದ ವಸ್ತುಗಳನ್ನು ರಾಸಾಯಿನಿಕ ಪರೀಕ್ಷೆಗೆ ಕಳುಹಿಸಲಾಯಿತು ಎಂಬ ಬಗ್ಗೆ ಸ್ಪಷ್ಟತೆ ಇರುವುದಿಲ್ಲ. ಆದ್ದರಿಂದ ನಿಖರವಾಗಿ ಯಾವ ಕಂಪನಿಯ ಮತ್ತು ಯಾವ ಕ್ರಮ ಸಂಖ್ಯೆಯ ಮದ್ಯದ ವಸ್ತುಗಳನ್ನು ರಾಸಾಯಿನಿಕ ಪರೀಕ್ಷಗೆ ಕಳುಹಿಸಿ ವರದಿಯನ್ನು ಪಡೆಯಲಾಯಿತು ಎಂಬ ಬಗ್ಗೆ ಸ್ಪಷ್ಟ ರುಜುವಾತಾಗಿರುವುದಿಲ್ಲ. ಆದ್ದರಿಂದ ರಾಸಾಯಿನಿಕ ಪರೀಕ್ಷಾ ವರದಿ ಮತ್ತು ನಿಪಿ-1 ಸ್ಥಳ/ಅಮಾನತ್ತು ಮಹಜರ್ ನಲ್ಲಿ ನಿರ್ಧಿಷ್ಟವಾಗಿ ಯಾವ ಮಾದರಿಯ ಯಾವ ಕ್ರಮ ಸಂಖ್ಯೆಯ ಮದ್ಯದ ವಸ್ತುಗಳನ್ನು ಪ್ರಯೋಗಾಲಯಕ್ಕೆ ರವಾನಿಸಲಾಯಿತು ಎಂಬ ಬಗ್ಗೆ ಸ್ಪಷ್ಟ ಉಲ್ಲೇಖ ಇಲ್ಲದೇ ರಾಸಾಯಿನಿಕ ಪರೀಕ್ಷೆ ವರದಿಯಲ್ಲಿ ಈ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಳ್ಳಲಾಗಿತ್ತು ಎಂಬ ಮದ್ಯದ ವಸ್ತುಗಳನ್ನೇ

ಕಳುಹಿಸಿರುತ್ತಾರೆಂದು ನಂಬಲು ಸಾಧ್ಯವಿರುವುದಿಲ್ಲ.

25. ಒಟ್ಟಾರೆಯಾಗಿ ಈ ಪ್ರಕರಣದಲ್ಲಿ 1 ನೇ ಆರೋಪಿಯನ್ನು ಸ್ಥಳದಲ್ಲಿ ಬಂಧಿಸಿದ್ದು 2 ನೇ ಆರೋಪಿ ಓಡಿ ಹೋದನು ಎಂದು ಹೇಳಲಾಯಿತು ಓಡಿ ಹೋದ 2 ನೇ ಆರೋಪಿಯ ಬಗ್ಗೆ 1 ನೇ ಆರೋಪಿ ಮಾಹಿತಿ ನೀಡಿರುತ್ತಾನೆ ಅಭಿಯೋಜನೆ ವಾದ ವಾಗಿದ್ದು ಸ್ಥಳದಲ್ಲಿ ಸಾಕಷ್ಟು ಗ್ರಾಹಕರು ಇದ್ದರು ಎಲ್ಲಾರೂ ಓಡಿ ಹೋದರು ಎಂದು ಅಭಿಯೋಜನೆ ಸಾಕ್ಷಿಗಳ ಮೂಲಕ ಕಂಡುಬಂದಿದ್ದು, ಸ್ಥಳೀಯ ಅಂಗಡಿ ಮಾಲೀಕರನ್ನು ಓಡಿ ಹೋದ ವ್ಯಕ್ತಿ ಬಗ್ಗೆ ವಿಚಾರಣೆ ಹೇಳಿಕೆ ಪಡೆದಿರುವುದಿಲ್ಲ ಸಾಕ್ಷಿದರರನ್ನಾಗಿ ವಿಚಾರಣೆಗೊಳಪಡಿಸಿರುವುದಿಲ್ಲ ದಾಳಿ ಸ್ಥಳವು ಗೊಲ್ಲರಹಳ್ಳಿ ಗ್ರಾಮವಾಗಿದ್ದು, ಗ್ರಾಮದ ಇತರೆ ಯಾವುದೇ ವ್ಯಕ್ತಿಗಳನ್ನು ಓಡಿ ಹೋದ ಆರೋಪಿಯ ಬಗ್ಗೆ ವಿಚಾರಣೆ ಮಾಡಿ ವಿವರಣೆಯನ್ನು ಪಡೆದುಕೊಂಡಿರುವುದಿಲ್ಲ ಅದೇ ರೀತಿ ದಾಳಿ ಸ್ಥಳದಲ್ಲಿದ್ದ ಮದ್ಯ ಮಾರಾಟ ಮಾಡುತ್ತಿದ್ದರು ಎನ್ನಲಾದ ಅಂಗಡಿಯೂ ಯಾವ ಮಾದರಿಯದಾಗಿದ್ದು, ಯಾವ ವಸ್ತುಗಳನ್ನು ಮಾರಾಟ ಮಾಡುತ್ತಿದ್ದರು ಈ ಬಗ್ಗೆ ಗ್ರಾಮ ಪಂಚಾಯಿತಿಯಿಂದ ಪರವಾನಗಿ ಪಡೆಯಲಾಗಿತ್ತೆ ಎಂಬ ಬಗ್ಗೆ ತನಿಖೆಯಲ್ಲಿ ಎಲ್ಲಿಯೂ ಉಲ್ಲೇಖವಿರುವುದಿಲ್ಲ. ಆದ್ದರಿಂದ ಅಂಗಡಿ ಇರುವ ಬಗ್ಗೆ ಸ್ಥಳದಲ್ಲಿ ಮದ್ಯದ ವಸ್ತುಗಳು ಇದ್ದ ಬಗ್ಗೆ ಪೂರಕ ಸಾಕ್ಷ್ಯಧಾರಗಳು ಇರುವುದಿಲ್ಲ ಕಾರಣ ಅಮಾನತ್ತು ಮಹಜರ್ ಸಾಕ್ಷಿದಾರರಾದ ಪ್ರಾಸಾ2 ಮತ್ತು 4 ರವರು ಪ್ರತಿಕೂಲ ಸಾಕ್ಷಿದಾರರಾಗಿದ್ದು ಅಮಾನತ್ತು ಮಹಜರ್ ರುಜುವಾತಾಗಿರುವುದಿಲ್ಲ.

26. ಪ್ರಸ್ತುತ 2 ನೇ ಆರೋಪಿ ದಾಳಿ ಸ್ಥಳದಿಂದ ಓಡಿ ಹೋಗಿರುತ್ತಾನೆಂದು ಅಭಿಯೋಜನೆಯ ಆರೋಪವಾಗಿದ್ದು, ಸದರಿ ಆರೋಪಿಯ ಬಗ್ಗೆ 1 ನೇ ಆರೋಪಿ ಮಾಹಿತಿಯನ್ನು ನೀಡಿರುತ್ತಾನೆಂದು ಹೇಳಿದ್ದು ಈ ಬಗ್ಗೆ 1 ನೇ ಆರೋಪಿಯ ಸ್ವ ಇಚ್ಛಾ ಹೇಳಿಕೆ ದಾಖಲಿಸಿಕೊಂಡಿರುವ ಬಗ್ಗೆ ತನಿಖೆಯಲ್ಲಿ ಕಂಡುಬಂದಿರುವುದಿಲ್ಲ ಅದೇ ರೀತಿ ಸ್ಥಳದಲ್ಲಿದ್ದ ಮದ್ಯ ಖರೀದಿಸುತ್ತಿದ್ದ ಇತರರು ಓಡಿ ಹೋದರು ಎಂದು ಅಭಿಯೋಜನೆಯ ಸಾಕ್ಷಿ ಪ್ರಾಸಾ-3 ರವರು ಹೇಳಿದ್ದು ಪ್ರಸ್ತುತ ಆರೋಪಿಯ ಬಗ್ಗೆ ಗ್ರಾಮದಲ್ಲಿ ಯಾರನ್ನು

ವಿಚಾರಿಸಿ ಮಾಹಿತಿ ಪಡೆದಿರುವುದಿಲ್ಲ 1ನೇ ಆರೋಪಿಗೆ ಮತ್ತು 2ನೇ ಆರೋಪಿಗೆ ಯಾವ ರೀತಿ ಸಂಬಂದ ಬಗ್ಗೆ ತನಿಖೆಯಲ್ಲಿ ಕಂಡುಬಂದಿರುವುದಿಲ್ಲ, 2ನೇ ಆರೋಪಿ ದಾಳಿ ಸ್ಥಳದ ಅಂಗಡಿ ಮಾಲೀಕ ಅಥವಾ ಮಾರಾಟ ಮಾಡುತ್ತಿದ್ದ ಎಂಬ ಬಗ್ಗೆ ಅಭಿಯೋಜನೆಯು ಸ್ಪಷ್ಟ ಮತ್ತು ಪೂರಕ ದಾಖಲೆಗಳೊಂದಿಗೆ ರುಜುವಾತುಪಡಿಸಿರುವುದಿಲ್ಲ. ಆದ್ದರಿಂದ 2ನೇ ಆರೋಪಿಯು ಆರೋಪ ಪಟ್ಟಿಯಲ್ಲಿ ಆರೋಪಿಸಿರುವಂತೆ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯವರು ಪೂರಕ, ಸುಸಂಬದ್ಧ ಮೌಖಿಕ ಮತ್ತು ಲಿಖಿತ ಸಾಕ್ಷ್ಯದಾರರನ್ನು ಹಾಜರುಪಡಿಸಿ ರುಜುವಾತುಪಡಿಸಲು ಸಂಪೂರ್ಣವಾಗಿ ವಿಫಲರಾಗಿರುತ್ತಾರೆಂದು ಕಂಡು ಬಂದಿರುತ್ತದೆ. ಆದ್ದರಿಂದ 2ನೇ ಆರೋಪಿಯ ವಿರುದ್ಧ ಅಭಿಯೋಜನೆಯವರು ಆರೋಪಿಸಲ್ಪಟ್ಟಂತೆ ಕಲಂ.32 ಮತ್ತು 34 ಕರ್ನಾಟಕ ರಾಜ್ಯ ಅಬಕಾರಿ ಕಾಯಿದೆ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆ ಎಂಬುದನ್ನು ಸಂಶಯಾತೀತವಾಗಿ ರುಜುವಾತುಪಡಿಸುವಲ್ಲಿ ವಿಫಲರಾಗಿರುತ್ತಾರೆ ಎಂದು ಈ ನ್ಯಾಯಾಲಯ ನಿರ್ಣಯಿಸುತ್ತದೆ. ಈ ಮೇಲ್ಕಂಡ ಎಲ್ಲಾ ಕಾರಣಗಳಿಗಾಗಿ ಈ ನ್ಯಾಯಾಲಯದ ಪರಿಗಣನೆಗೆ ಮೂಡಿ ಬಂದ ಅಂಶ 1 ಮತ್ತು 2 ಅನ್ನು ನಕಾರಾತ್ಮಕವಾಗಿ ಈ ನ್ಯಾಯಾಲಯವು ಉತ್ತರಿಸಿರುತ್ತದೆ.

**27.** ಅಂಶ 3 ಃ- ಈ ಮೇಲೆ ಚರ್ಚಿಸಲ್ಪಟ್ಟ ಕಾರಣಗಳಿಗಾಗಿ ಈ ಕೆಳಕಂಡಂತೆ ನ್ಯಾಯಾಲಯವು ಆದೇಶಿಸಿರುತ್ತದೆ.

## ಃಃಆದೇಶಃಃ

ದಂ.ಪ್ರ.ಸಂ.ಕಲಂ 248(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಉಪಯೋಗಿಸಿ ಕರ್ನಾಟಕ ರಾಜ್ಯ ಅಬಕಾರಿ ಕಾಯಿದೆ ಕಲಂ.32 ಮತ್ತು 34 ರಡಿಯಲ್ಲಿ ಮಾಡಲಾದ ಆರೋಪಗಳಿಗೆ 2ನೇ ಆರೋಪಿತನನ್ನು ನಿರ್ದೋಷಿ ಎಂದು ತೀರ್ಮಾನಿಸಿ ಖುಲಾಸೆಗೊಳಿಸಿರುತ್ತದೆ.

2ನೇ ಆರೋಪಿತನು ಮತ್ತು ಜಾಮೀನುದಾರರು ಬರೆದುಕೊಟ್ಟ ಜಾಮೀನು ಮುಚ್ಚಳಿಕೆಗಳನ್ನು ರದ್ದುಗೊಳಿಸಲಾಗಿರುತ್ತದೆ.

2 ನೇ ಆರೋಪಿತನು ಮತ್ತು ಜಾಮೀನುದಾರರು ಕಲಂ 437 (ಎ) ರಡಿಯಲ್ಲಿನ ಷರತ್ತುಗಳನ್ನು ಪೂರೈಸುವ ಸಲುವಾಗಿ ಬರೆದುಕೊಟ್ಟ ಜಾಮೀನು ಮುಚ್ಚಳಿಕೆಗಳನ್ನು 6 ತಿಂಗಳ ಕಾಲ ಚಾಲ್ತಿಯಡಲಾಗಿರುತ್ತದೆ.

2 ನೇ ಆರೋಪಿತನು ಇಂದಿನಿಂದ ಸ್ವತಂತ್ರರಿರುತ್ತಾನೆ.

ಅಬಕಾರಿ ಅಧಿಕಾರಿಗಳು ವಶಪಡಿಸಿಕೊಂಡು ಮಾಲುಪಟ್ಟಿ ಸಂಖ್ಯೆ 27/2015 ದಿ.25/02/2015 ವಶಪಡಿಸಿಕೊಂಡ ಪೈಕಿ ನ್ಯಾಯಾಲಯದ ಮಾಲು ಪಟ್ಟಿ ಸಂಖ್ಯೆ 169/2019 ರಂತೆ ನ್ಯಾಯಾಲಯದ ವಶಕ್ಕೆ ನೀಡಿ ವಿಚಾರಣೆ ವೇಳೆ ಮುದ್ದೆ ಮಾಲು 1 ರಿಂದ 4 ಎಂದು ಗುರುತಿಸಿಕೊಂಡಿರುವ (1) 180 ಎಂ.ಎಲ್.ನ 1 ಓಲ್ಡ್ ಟವರಿನ್ ವಿಸ್ಕಿ ಪೌಚು (2) 90 ಎಂ.ಎಲ್.ನ ರಾಜಾ ವಿಸ್ಕಿ 1 ಪೌಚುಗಳು (3) 180 ಎಂ.ಎಲ್.ನ ರಾಜಾ ವಿಸ್ಕಿ 1 ಪೌಚ್‌ಗಳು (4) 330 ಎಂ.ಎಲ್.ನ 1 ನಾಕ್ ಔಟ್ ಬಾಟಲಿ ನಿರುಪಯುಕ್ತ ವಸ್ತುವಾಗಿರುವುದರಿಂದ ಅಪೀಲು ಅವಧಿಯ ನಂತರ ನಾಶಪಡಿಸಲು ಆದೇಶಿಸಲಾಗಿದೆ.

(ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದಲ್ಲಿ ಉಕ್ತಲೇಖನ ಕೊಟ್ಟು ಬೆರಳಚ್ಚಿಸಿ, ನಂತರ ನಾನು ಅದನ್ನು ಓದಿ ತಪ್ಪುಗಳನ್ನು ತಿದ್ದಿ ನಂತರ ಈ ದಿನ ಅಂದರೆ ದಿನಾಂಕ 24 ನೇ ಜುಲೈ ಮಾಹೆ 2026 ನೇ ಇಸವಿಯಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿರುತ್ತೇನೆ).

(ಹನುಮಂತರಾಯಪ್ಪ.ಬಿ.ಆರ್)
ಅಪರ ಸಿವಿಲ್ ನ್ಯಾಯಾಧೀಶರು
ಪ್ರ.ದ.ನ್ಯಾ.ದಂಡಾಧಿಕಾರಿರವರು, ಹೊಳಲ್ಕೆರೆ

## ಃಃ ಅನುಬಂಧ ಃಃ

**ಅಭಿಯೋಜನ ಪಕ್ಷದ ಪರ ವಿಚಾರಣೆ ಮಾಡಿದ ಸಾಕ್ಷಿದಾರರ ಪಟ್ಟಿಃ**

| | |
|---|---|
| ಪ್ರಾಸಾ.1/ಚಾಸಾ-1 | ಃ ಸಂಗಮೇಶ ಎಸ್.ಜಿ |
| ಪ್ರಾಸಾ.2 /ಚಾಸಾ-2 | ಃ ಕರಿಸಿದ್ದಯ್ಯ ಒಡೆಯರ |
| ಪ್ರಾಸಾ.3/ಚಾಸಾ-3 | ಃ ಮಹೇಂದ್ರ ಕುಮಾರ್ ಕೆ.ಹೆಚ್ |
| ಪ್ರಾಸಾ.4 /ಚಾಸಾ-6 | ಃ ಪ್ರದೀಪ ಕುಮಾರ್ |
| ಪ್ರಾಸಾ.5/ಚಾಸಾ-7 | ಃ ಹಾಲೇಶ್ ಜಿ |
| ಪ್ರಾಸಾ.6/ಚಾಸಾ-5 | ಃ ರಂಗಸ್ವಾಮಿ |

**ಆರೋಪಿ ಪರ ವಿಚಾರಣೆ ಮಾಡಲಾದ ಸಾಕ್ಷಿದಾರರ ಪಟ್ಟಿಃ**

- ಇಲ್ಲಾ -

**ಅಭಿಯೋಜನ ಪಕ್ಷದವರ ಪರ ನಿಶಾನಿಸಲಾದ ದಾಖಲಾತಿಗಳ ಪಟ್ಟಿಃ**

ನಿಪಿ.1 ಃ ಸ್ಥಳ ಮಹಜರ್

ನಿಪಿ.2 ಃ ಪ್ರಾಸಾ-2 ರವರ ಹೇಳಿಕೆ
ನಿಪಿ.3 ಃ ದೂರು /ವರದಿ
ನಿಪಿ.4 ಃ ಪ್ರಾಸಾ-4 ರವರ ಹೇಳಿಕೆ
ನಿಪಿ.5 ಃ ಪ್ರಥಮ ವರ್ತಮಾನ ವರದಿ
ನಿಪಿ.6 ಃ ರಾಸಾಯಿನಿಕ ಪರೀಕ್ಷಾ ವರದಿ

ಆರೋಪಿ ಪರ ನಿಶಾನಿಸಲಾದ ದಾಖಲಾತಿಗಳ ಪಟ್ಟಿಃ

- ಇಲ್ಲಾ -

ಅಭಿಯೋಜನ ಪಕ್ಷದವರ ಪರ ನಿಶಾನಿಸಲಾದ ಮುದ್ದೆ ಮಾಲುಗಳ ಪಟ್ಟಿಃ

ಮು.ಮಾ.1 ಃ **(1) 180** ಎಂ.ಎಲ್.ನ **1** ಓಲ್ಡ್ ಟವರಿನ್ ವಿಸ್ಕಿ ಪೌಚು
**(2) 90** ಎಂ.ಎಲ್.ನ ರಾಜಾ ವಿಸ್ಕಿ **1** ಪೌಚುಗಳು
**(3) 180** ಎಂ.ಎಲ್.ನ ರಾಜಾ ವಿಸ್ಕಿ **1** ಪೌಚ್‌ಗಳು
**(4) 330** ಎಂ.ಎಲ್.ನ **1** ನಾಕ್ ಔಟ್ ಬಾಟಲಿ

HANUMANTHARAYAPPA B R

Digitally signed by HANUMANTHARAYAPPA B R
Date: 2026.07.30 15:31:38 +0530

ಅಪರ ಸಿವಿಲ್ ನ್ಯಾಯಾಧೀಶರು
ಪ್ರ.ದ.ನ್ಯಾ.ದಂಡಾಧಿಕಾರಿರವರು, ಹೊಳಲ್ಕೆರೆ